

ಕಲಬುರ್ಗಿ ಜಾತ್ರೆಗಳಲ್ಲೆಲ್ಲ ಶರಣಬಸವೇಶ್ವರ ರಥೋತ್ಸವ ಪ್ರಸಿದ್ಧವಾದದ್ದು. ಭಕ್ತರೆಲ್ಲ ಸೇರಿಕೊಂಡು ಎಳೆವ ಬಣ್ಣ ಬಣ್ಣದ ತೇರು ಜರುಗುತ್ತ ಹೋಗುವ ಪರಿಯನ್ನು ನೋಡುವುದೇ ವಿಶೇಷ ಅನುಭವ



ಒಂಬತ್ತು ವರ್ಷಕ್ಕೊಮ್ಮೆ, ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ ಬಾಚೇನಹಳ್ಳಿ ಐದು ವರ್ಷಕ್ಕೊಮ್ಮೆ ಊರಮ್ಮನ ಜಾತ್ರೆಗೆ ಮುನ್ನ ಪಾರಿಬೇಲಿ ಆಚರಣೆ ನಡೆಯುತ್ತದೆ. ಹೆಣ್ಣುದೇವರುಗಳ ಜಾತ್ರೆಯ ಸಂದರ್ಭದಲ್ಲೇ ಈ ಆಚರಣೆ ಹೆಚ್ಚಿರುವುದು ವಿಶೇಷ.

ಊರಿನ ಸುತ್ತ ಮುಳ್ಳಿನ ಬೇಲಿ ಹಾಕಲಾಗುತ್ತದೆ. ನಿರ್ದಿಷ್ಟ ಸ್ಥಳದಲ್ಲಿ ಮಾತ್ರ ಪ್ರವೇಶ ಮತ್ತು ನಿರ್ಗಮನ ದ್ವಾರಗಳಿರುತ್ತವೆ. ಊರಿಂದ ಹೊರಗೆ ಹೋಗುವವರು ಏನನ್ನೂ ತಮ್ಮೊಂದಿಗೆ ಒಯ್ಯುವಂತಿಲ್ಲ. ಆದರೆ ಮೊಬೈಲ್ ಫೋನ್ ಒಯ್ಯಬಹುದು. ಇದು ಆಧುನಿಕ ಕಾಲದ ರಿಯಾಯಿತಿ!

ಊರಿನ ಒಳಕ್ಕೆ ಬರುವವರು ಚಪ್ಪಲಿಗಳನ್ನು ಹೊರಗೆ ಬಿಟ್ಟೇ ಬರಬೇಕು. ಈ ದ್ವಾರವನ್ನು ತಳವಾರರು ಕಾಯುತ್ತಾರೆ. ಊರಿಗೆ ವಿಘ್ನ ಎದುರಾಗದಿರಲಿ ಎಂದು ಒಂಬತ್ತನೇ ದಿನದ ಬೆಳಗಿನ ಜಾವ ಊರಿನ ಸುತ್ತ ಚರಗ ಚೆಲ್ಲುತ್ತಾರೆ. ಊರಿನ ಮಧ್ಯಭಾಗದಲ್ಲಿ ಚೌಕಿಯನ್ನು ನಿರ್ಮಿಸಿ ದೇವರ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗುತ್ತದೆ. ನಂತರ ಜಾತ್ರೆ ಚಟುವಟಿಕೆಗಳು ಆರಂಭವಾಗುತ್ತವೆ.

## ಸಾಹಿತ್ಯ ಸಮ್ಮೇಳನ ಜಾತ್ರೆ

ಜಾತ್ರೆಗೆ ಧಾರ್ಮಿಕ ಆಯಾಮ ಇರುವಂತೆಯೇ, ಸಾಹಿತ್ಯಿಕ ಆಯಾಮವೂ ಉಂಟು. ಅದನ್ನು ಸಾಹಿತ್ಯ ಸಮ್ಮೇಳನದ ಕನ್ನಡಿಯಲ್ಲಿ ನೋಡಬಹುದು.

ಸರ್ಕಾರದ ಕೋಟ್ಯಂತರ ರೂಪಾಯಿ ಅನುದಾನದಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನವನ್ನು ಜಾತ್ರೆ ಎಂದು ಕರೆಯುವುದಕ್ಕೆ ಹಲವರ ತಕರಾರಿದೆ. ಆದರೆ, ಸಮ್ಮೇಳನದ ವಿರೋಧಿಗಳಿಗೆ ಅದನ್ನು 'ಜಾತ್ರೆ' ಎಂದು ಕರೆದರೆ ಏನೋ ತೃಪ್ತಿ. ಸಮಾಧಾನ. ಸಮ್ಮೇಳನಕ್ಕೆ ಜಾತ್ರೆಯ ರೂಪ ಬಂದಿದ್ದಾದರೂ ಹೇಗೆ? ಮೊದಲಿನಿಂದಲೂ ಇದು ಹೀಗೆಯೇ? ಅದನ್ನು ಹಿರಿಯರು ಹೇಳಬೇಕು.

ಅಲ್ಲಿರುವುದು ಕನ್ನಡತಾಯಿ ಭುವನೇಶ್ವರಿಯ ತೇರು. ಆದರೂ ಅದನ್ನು ಎಳೆಯುವವರು ಕನ್ನಡಿಗರು. ಅವರೊಳಗಿಂದಲೇ ಮೂಡಿದ ಪ್ರತಿನಿಧಿಯೊಬ್ಬರಿಗೆ ಅಧ್ಯಕ್ಷ ಸ್ಥಾನ. ಹಲವು ವೇದಿಕೆಗಳಲ್ಲಿ ಚರ್ಚೆ, ಭಾಷಣ, ಕವಿಗೋಷ್ಠಿ. ಕೇಳಿಸಿಕೊಳ್ಳಬೇಕೆಂದು ಬಂದವರು ಗಂಭೀರವಾಗಿ ಕುಳಿತುಕೊಳ್ಳುವರು. ಉಳಿದವರಿಗೆ ಭಾಷಣ ಭೀಷಣ.

ಹಳೇ ಗೆಳೆಯರ ಭೇಟಿಗೆ ಅನುವು ಮಾಡುವ ಸಮ್ಮೇಳನ ಜಾತ್ರೆಗೆ ಬರುವುದೇ ಒಂದು ಸಂಭ್ರಮ. ಸಾಹಿತ್ಯ ಆಮೇಲೆ. ಪುಸ್ತಕ ಕೊಳ್ಳುವವರಿಗೆ ಉಂಟು ಕಾಲುಗಳು ದಣಿಯುವಷ್ಟು ಉದ್ದದ ಮಳಿಗೆಗಳ ಸಾಲು, ಜೊತೆಗೆ ಆಕರ್ಷಕ ರಿಯಾಯಿತಿ ಬೇರೆ. ಸಮ್ಮೇಳನಕ್ಕೆ ಬಂದು ಊಟಕ್ಕಾಗಿ ಕ್ಯೂ ನಿಲ್ಲುವುದರಲ್ಲಿ ಬೇಸರವೇನಿಲ್ಲ. ಅಲ್ಲಿ ಊಟದ್ದೇ ದೊಡ್ಡ ಚರ್ಚೆ. ಸಾಹಿತ್ಯ, ವಿಮರ್ಶೆ ಎಲ್ಲವೂ ಆಮೇಲೆ.

ಇದೂ ವರ್ಷಕ್ಕೊಮ್ಮೆ ನಡೆಯುವ ಜಾತ್ರೆಯೇ. ಅಖಿಲ ಭಾರತ ಎಂದರೆ ದೊಡ್ಡ ಜಾತ್ರೆ, ಜಿಲ್ಲೆ, ತಾಲ್ಲೂಕುಗಳಲ್ಲಿ ಸಣ್ಣ ಜಾತ್ರೆ. ಸಣ್ಣ ಜಾತ್ರೆಗೆ ಎಂದಿನಂತೆ ಕಡಿಮೆ ಜನ.

## ದಸರೆಯ ಸೊಗಸು

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಪ್ರಭುತ್ವವನ್ನು ಮೆರೆಸುವ ಮೈಸೂರು ದಸರೆಯೂ ಜಾತ್ರೆಯೇ.

ಅಲ್ಲಿ ತಾಯಿ ಚಾಮುಂಡೇಶ್ವರಿಯ ಅಂಬಾರಿ ಮೆರವಣಿಗೆ ಉಂಟು. ಆಕ್ಷೇಪಣೆ, ವಿರೋಧಗಳ ನಡುವೆಯೆ ಅದು 'ಸಾಂಸ್ಕೃತಿಕ ಉತ್ಸವ'ವಾಗಿ ಪ್ರತಿ ವರ್ಷವೂ ನಡೆಯುತ್ತಲೇ ಇದೆ. ದೇಶದ ಎಲ್ಲೆಡೆಯಿಂದ, ವಿದೇಶಗಳಿಂದ ಈ ಉತ್ಸವಕ್ಕೆ ಜನ ಬರುತ್ತಾರೆ. ರಾಜ್ಯ ಸರ್ಕಾರವೇ ನಡೆಸುವ ಬೇರೆಲ್ಲ ಉತ್ಸವಗಳಿಗಿಂತಲೂ ದಸರೆಗೆ ಹೆಚ್ಚಿನ ಮಹತ್ವ.

ಈಗ ಉತ್ಸವಗಳ ಪಟ್ಟಿ ದೊಡ್ಡದು. ಕಿತ್ತೂರು ಉತ್ಸವ, ಗದಗ ಜಿಲ್ಲೆಯ ಲಕ್ಕುಂಡಿ ಉತ್ಸವ, ಉತ್ತರ ಕನ್ನಡ ಜಿಲ್ಲೆಯ ಬನವಾಸಿಯ ಕದಂಬೋತ್ಸವ, ಬಳ್ಳಾರಿಯ ಹಂಪಿ ಉತ್ಸವ,, ಖಾಸಗಿಯಾಗಿ ನಡೆಯುವ ಪುಸ್ತಕ ಹಬ್ಬ, ಬೆಂಗಳೂರು ಉತ್ಸವ,.. ಜಾತ್ರೆಗಳು ಬಹುರೂಪಿ ಎಂದಿದ್ದು ಇದೇ ಕಾರಣಕ್ಕೆ. ಕಾಲಕ್ಕೆ ತಕ್ಕಂತೆ ಬದಲಾಗದ ಜಾತ್ರೆಗಳ ಜೊತೆಗೆ, ಹೊಸ ಹೆಸರು, ಹೊಸ ರೂಪಗಳಲ್ಲಿ ಹೊಸ ಜಾತ್ರೆಗಳು ಆರಂಭವಾಗಿವೆ. ಜನ ಮರುಳೋ, ಜಾತ್ರೆ ಮರುಳೋ.

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in